**ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

**ಅಸಲು ದಾವಾ ನಂಬ್ರಃ 188/2010 ಪಿಡಬ್ಲ್ಯೂ-1**

**ದಿನಾಂಕಃ 05-02-2021 ರಂದು ಸಾಕ್ಷಿಯನ್ನು ಪುನಹ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು**

**ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಎಸ್.ಎಸ್. ರವರಿಂದ**

ನಿಪಿ-7 ಸಾಗುವಳಿ ಚೀಟಿಯಲ್ಲಿ ಕಾಣಿಸಿದ ಸ್ಥಳದ ಬಾಬ್ತು ಎಫ್.ಎಂ.ಬಿ. ನಕ್ಷೆಯನ್ನು ಇಲ್ಲಿಯವರೆಗೆ ನೋಡಿರುವುದಿಲ್ಲ. ಎಫ್.ಎಂ.ಬಿ. ನಕ್ಷೆ ಇರಲೇಬೇಕು. ಸ್ಥಳದ ಗುರುತಿಸುವಿಕೆ ಮತ್ತು ವಿಸ್ತೀರ್ಣವನ್ನು ನೋಡಲು ಸಾರ್ವಜನಿಕ ದಾಖಲೆ ಎಫ್.ಎಂ.ಬಿ. ನಕ್ಷೆ ಎಂದರೆ ಸರಿ. ದಾವಾ ಸ್ಥಳದ ವಿಸ್ತೀರ್ಣದ ಬಗ್ಗೆ ತುಂಬಾ ತಕರಾರು ಇರುವುದರಿಂದ ಅದನ್ನು ನಾನು ಹಾಜರುಪಡಿಸಲೇ ಬೇಕಿತ್ತು ಎಂದರೆ ಸರಿಯಲ್ಲ. ಯಾವುದೇ ಸ್ಥಳದ ನಿಖರವಾದ ವಿಸ್ತೀರ್ಣ ನೋಡಬೇಕಾದರೆ ಆಕಾರ್ ಬಂದ್ ಅಥವಾ ರಿವಿಜನ್ ಸೆಟ್ಲಮೆಂಟ್ ರಿಜಿಸ್ಟರ್ ನೋಡಬೇಕು ಎಂದರೆ ಸರಿ. ದಾವಾ ಸ್ಥಳಕ್ಕೆ ಸಂಬಂಧಿಸಿದಂತೆ ಆಕಾರ್ ಬಂದ್ ಅಥವಾ ರಿವಿಜನ್ ಸೆಟ್ಲಮೆಂಟ್ ರಿಜಿಸ್ಟರ್ ಪ್ರಾಮುಖ್ಯ ದಾಖಲೆ ಎಂದರೆ ಸರಿ.

ನಿಪಿ-7 ರಲ್ಲಿ ಕಾಣಿಸಿದ ಆಸ್ತಿಗಳಿಗೆ ನಮಗೆ ಹಕ್ಕು ಪ್ರಾಪ್ತವಾಗಿರುವುದು ನಿಪಿ-7 ರ ಪ್ರಕಾರ ಎಂದರೆ ಸರಿ, ಅದಕ್ಕಿಂತ ಮೊದಲು ಸರಕಾರಿ ಸ್ಥಳ ಎಂದರೆ ಸರಿ. 1958 ರಲ್ಲಿ ಸರಕಾರದವರು ನನ್ನ ತಂದೆಗೆ ಗೇರು ಲೀಸ್ ಗೆ 30 ವರ್ಷಗಳ ಅವಧಿಗೆ ಸದರಿ ಸ್ಥಳವನ್ನು ನೀಡಿರುತ್ತಾರೆ. ನಂತರ ಸೆಂಟ್ಸ್ ಗೆ ರೂಪಾಯಿ ಹತ್ತು ಪ್ರಕಾರ ಸರಕಾರಕ್ಕೆ ಪಾವತಿ ಮಾಡಿಸಿಕೊಂಡು ಸ್ಥಳ ನೀಡಿರುತ್ತಾರೆ ಎಂದರೆ ಸರಿ. 1958 ನೇ ವರ್ಷದ ಲೀಸಿ ಡೀಡ್ ನನ್ನ ತಂದೆಯವರ ಹತ್ತಿರ ಇರುತ್ತದೆ ಎಂದರೆ ಸರಿ, ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆನು.

1958 ರಲ್ಲಿ ಸರಕಾರದವರು ಗೇರು ಲೀಸ್ ಗೆ ಕೊಡುವ ಸಂದರ್ಭ ದಲ್ಲಿ ಸ್ಥಳದ ಕಣ್ಣು ನಕ್ಷೆ ತಯಾರು ಮಾಡಿ ಲಗತ್ತಿಸಿರುತ್ತಾರೆ ಎಂದರೆ ಸರಿ. ಸದರಿ ಕಣ್ಣು ನಕ್ಷೆಯನ್ನು ಸರಿಯಾಗಿ ತಯಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ಇಲಾಖೆ ಮತ್ತು ಸರ್ವೇಯರ್ ರವರು ಮೂರು

ಬಾರಿ ಸ್ಥಳದ ತನಿಖೆ ಮಾಡಿ ನಕ್ಷೆ ತಯಾರಿಸಿ ಗೇರು ಲೀಸ್ ಗೆ ನೀಡಿರುತ್ತಾರೆ ಎಂದರೆ ಸರಿ. ಅಸಲು ನಕ್ಷೆ ತಾಲೂಕು ಕಚೇರಿಯಲ್ಲಿರುತ್ತದೆ. ನಾನು ಅದರ ನಕಲು ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆನು. ನಿಪಿ-7 ನನಗೆ ಸರಕಾರಿ ಸ್ಥಳ ಪ್ರಾಪ್ತವಾದ ಬಗ್ಗೆ ಪ್ರಪ್ರಥಮ ದಾಖಲೆ ಎಂದರೆ ಸರಿ. ನಿಪಿ-7 ರ ಮೂರನೇ ಪುಟದಲ್ಲಿ ಉಪ ಷರತ್ತುಗಳಾಗಿ 1 ಮಂಜೂರಾದ ವಿಸ್ತೀರ್ಣವು ಭೂ ಮಾಪನಾ ಇಲಾಖೆಯವರ ತಾಂತ್ರಿಕ ಅಳತೆಯಿಂದ ಅಂತಿಮವಾಗಿ ಗುರುತಿಸಿದ ವಿಸ್ತೀರ್ಣಕ್ಕೆ ಸರಿಯಾಗಿ ಬದಲಾವಣೆ ಮಾಡುವ ಷರತ್ತಿಗೊಳಪಟ್ಟಿರುತ್ತದೆ ಎಂದರೆ ಸರಿ. ನಿಪಿ-7 ಪಡೆದ ನಂತರ ನಾನು ಶುಲ್ಕ ಪಾವತಿಸಿ ಸರ್ವೆ ಮಾಡಲು 1993 ರಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ನಾನು ಸದರಿ ಸ್ಥಳದ ಸ್ವಾದೀನದಲ್ಲಿರುವುದರಿಂದ ನನಗೆ ಅದರ ಅಳತೆ ಮಾಡಿಸುವ ಅಗತ್ಯತೆ ಕಂಡುಬಂದಿರುವುದಿಲ್ಲ.

ನಿಪಿ-7 ರಲ್ಲಿ ಕಾಣಿಸಿರುವ ಆಸ್ತಿಗಳಿಗೆ ಮೂರಾ ಕಡೆ ನನ್ನ ತಂದೆಯವರು ಹಾಕಿದ ಹಳೆಯ ಅಗಳು ಧರೆ ಹಾಗೂ ಒಂದು ಕಡೆ ಟಾರು ರೋಡ್ ಇರುತ್ತದೆ. ನಿಪಿ-8 ರಂತೆ ತಹಶೀಲ್ದಾರ್, ಕುಂದಾಪುರ ರವರು ಸ.ನಂ. 261 ರಲ್ಲಿ ಮಂಜೂರು ಮಾಡಿರುವ ಮಂಜೂರು ದಾಖಲೆಗಳು ಹಾಗೂ ಮಂಜೂರಿದಾರರ ಸ್ವಾದೀನಾನುಭವದ ಸ್ಥಳಗಳನ್ನು ಕ್ರಮಬದ್ಧವಾಗಿ ಪರಿಶೀಲಿಸಿ ಹೊಸದಾಗಿ ಪೋಡಿ ದುರಸ್ತಿ ಕ್ರಮ ಜರುಗಿಸಲು ಕ್ರಮ ವಹಿಸುವುದು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಒಂಭತು ವರ್ಷಗಳ ಹಿಂದೆ ಆದೇಶವಾಗಿದ್ದರೂ ಸಹಾ ನಾನು ಪೋಡಿ ದುರಸ್ತಿಗಾಗಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನ್ಯಾಯಾಲಯದಲ್ಲಿ ದಾವೆ ಬಾಕಿ ಇರುವುದರಿಂದ ತಹಶೀಲ್ದಾರರು ತಿರಸ್ಕಾರ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಪೋಡಿ ದುರಸ್ತಿ ಮಾಡುವುದು ಮಾನ್ಯ ನ್ಯಾಯಾಲಯದ ಕೆಲಸ ಅಲ್ಲ ಎಂದರೆ ಸರಿಯಲ್ಲ. ಮ್ಯುಟೇಶನ್ ಪ್ರೋಸೀಡಿಂಗ್ಸ್ ಮತ್ತು ಪೋಡಿ ಪ್ರೋಸೀಡಿಂಗ್ಸ್ ಬೇರೆ ಬೇರೆ ಎಂದರೆ ಸರಿ.

(ಈ ಹ ಂತದಲ್ಲಿ ಮುಂದುವರಿದ ಪಾಟಿ ಸವಾಲಿಗಾಗಿ ಮುಂದೂಡಲಾಯಿತು)

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ